ಈ ಸಭೆಯಲ್ಲಿ ಕೊಡಬೇಕೆಂದು ಕೇಳುತ್ತಿದ್ದೇನೆ. ತಾವು ಸೋಮವಾರ ಕೊಡುತ್ತೀರಾ ಅಥವಾ ಈವತ್ತೇ ಉತ್ತರ ಕೊಡುತ್ತೀರಾ ಎಂಬುದನ್ನು ತಿಳಿಸಬೇಕು?

ಶ್ರೀ ಬಿ. ವಿ. ಕಕ್ಕಿಲಾಯ.—ಈ ವಿಚಾರ ಪತ್ರಿಕೆಯಲ್ಲಿ ಬಂದಿರುತ್ತದೆ. ಮೆಡಿಕಲ್ ಕಾಲೇಜಸ್‌ಗೆ ಅಡ್ಮಿಷನ್ ಆಗಲು ೨೫ ನೇ ತಾರೀಖಿನವರೆಗೆ ಟೈಮ್ ಕೊಟ್ಟಿರುತ್ತೀರಿ ಇದರಲ್ಲಿ ಗುಲ್ಬರ್ಗಾ, ದಾವಣಗೆರೆ, ಬೇಗಾಮ್ ಕಾಲೇಜ್‌ಸ್‌ಗಳಿಗೆ ಅಡ್ಮಿಷನ್ ಕವಿ ಟಿಯೆಂದು ಮಾಡಿರುತ್ತೀರಿ. ಆದರೆ ಮಣಿಪಾಲ್ ಕಾಲೇಜಿನ ವಿಷಯು ಇದರಲ್ಲಿ ಕೊಟ್ಟಿಲ್ಲ. ಈವತ್ತಿನದಿವಸ ಮಣಿಪಾಲ್ ಕಾಲೇಜಿಗೆ ಬರತಕ್ಕಂಥ ಫಾರಿನ್ ಸ್ಟೂಡೆಂಟ್ಸ್‌ಗೆ ನಿಯಂತ್ರಣವಿಲ್ಲದೆ ಅವರನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೀರೆಂದು ಇದರಿಂದ ತಿಳಿಯುತ್ತದೆ. ಆದ್ದರಿಂದ ಈ ಎರಡು ವಿಷಯಗಳಲ್ಲಿ ಸ್ಪಷ್ಟೀಕರಣವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪಪ್ಪ.—ಸೋಮವಾರದ ದಿವಸ ಹೇಳುತ್ತೇನೆ.

ಅಧ್ಯಕ್ಷರು.—ಸೋಮವಾರದ ಅಜೆಂಡಾದಲ್ಲಿ ಇದನ್ನು ಸೇರಿಸಿಕೊಳ್ಳಬಹುದು.

Statement by the Minister of State for Information and Power re : *Statement connecting Statement of 22-6-77*

SRI B. SUBBAYYA SHETTY (Minister of state for Information and Power).— Madam Speaker, I would like to make the following corrections to my speech in the Assembly dated 22-6-1977.

I have said in that speech, "Recently, we have released to "Taruna Bharat" also. Now the correction I want to make is this: For those words please substitute the words "Recently we have included "Taruna Bharat" in the current year's media list for release of advertisements."

ಶ್ರೀ ಎಚ್. ಡಿ. ದೇವೇಗೌಡ —ಮಾನ್ಯ ಮಂತ್ರಿಗಳು ಅಡ್ವರ್ಟೈಸ್‌ಮೆಂಟ್ ಬಗ್ಗೆ ಕೊಟ್ಟ ವಿವರಣೆ ನೋಡಿದಾಗ ಸರ್ಕಾರದವರು ಈ ಬಗ್ಗೆ ತಮ್ಮದು ಯಾವ ನೀತಿಯನ್ನೂ ಬದಲಾವಣೆಮಾಡಿಲ್ಲವೆಂದು ತೋರಿಬರುತ್ತದೆ. ಅದಕ್ಕೆ ಒಂದು ನೀತಿ ನಿಯಮವಿರುವುದಿಲ್ಲ ನಾವು ಅದರ ಬಗ್ಗೆ ಈಗ ಚರ್ಚೆಗೆ ತೆಗೆದುಕೊಳ್ಳುವುದು ಸರಿಯಾದುದಲ್ಲ. ಮಾನ್ಯ ಸಭಾಧ್ಯಕ್ಷರವರೇ ಒಂದು ವಿಷಯವನ್ನು ಈ ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ. ಏನೆಂದರೆ, ಅಡ್ವರ್ಟೈಸ್‌ಮೆಂಟ್ ಕೊಡತಕ್ಕಂಥ ಕಾಲದಲ್ಲಿ ಒಂದು ಕಾನೂನು, ಒಂದು ನಿಯಮಾವಳಿಯನ್ನು ಇಟ್ಟುಕೊಂಡು ಇಷ್ಟು ಸರ್ಕ್ಯುಲೇಷನ್ ಇದ್ದರೆ ಇಷ್ಟು ಅಡ್ವರ್ಟೈಸ್ ಕೊಡಬೇಕು ಎಂದು ನಿಯಮ ಇಟ್ಟುಕೊಳ್ಳಬೇಕು. ತಮ್ಮ ಪಾರ್ಟಿಗೆ ಬೇಕಾಗಿ ಅಡ್ವರ್ಟೈಸ್‌ಮೆಂಟ್ ಕೊಡಬಾರದು. ಆದರ ಎರಡು ಪೈಸೆ ಪೇಪರ್‌ಗಳಿಗೆಲ್ಲ ಒಂದು ಲಕ್ಷ ರೂಪಾಯಿಗಳವರೆಗೂ ಅಡ್ವರ್ಟೈಸ್‌ಮೆಂಟ್ ಕೊಟ್ಟಿರುತ್ತಾರೆ. ಇದನ್ನು ಡಿಸ್‌ಕಸ್ ಮಾಡುವಾಗ ಇದರ ಬಗ್ಗೆ ವಿವರಣೆ ಕೊಡಿ, ಒಂದೂವರೆ ಸಾವಿರ ಸರ್ಕ್ಯುಲೇಷನ್ ಇರತಕ್ಕಂಥ ಪತ್ರಿಕೆಗೆ ೧೫ ಸಾವಿರ ರೂಪಾಯಿಗಳ ಜಾಹೀರಾತು ಕೊಟ್ಟಿರುತ್ತಾರೆ. ಆದ್ದರಿಂದ ಸರ್ಕಾರದವರು ಏನಾದರೂ ಅಡ್ವರ್ಟೈಸ್‌ಮೆಂಟ್ ಕೊಡತಕ್ಕಂಥ ಕಾಲದಲ್ಲಿ ಪತ್ರಿಕೆಗಳ ಸರ್ಕ್ಯುಲೇಷನ್ ಆಧಾರದಮೇಲೆ ಅಡ್ವರ್ಟೈಸ್‌ಮೆಂಟ್ ಕೊಡಬೇಕೆಂದು ಸ್ಪಷ್ಟೀಕರಣ ನೀಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಬಿ ಸುಬ್ಬಯ್ಯಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋದ್ಯಕ್ಷರ ನಾಯಕರು ಕೇಳಿದ ಮಾಹಿತಿಯನ್ನು ಈ ಸಭೆಯ ಟೇಬಲ್ ಮೇಲೆ ಇಟ್ಟಿದ್ದೇನೆ. ಅವರಿಗೆ ತಲಿಪ್ಪನ ಒಂದು ಕಾಪಿ ಸಿಕ್ಕಿದೆ ಎಂದು ನಾನು ನೆನಸಿಕೊಂಡಿದ್ದೇನೆ.

ಶ್ರೀ ಎಚ್ ಡಿ. ದೇವೇಗೌಡ.—ಮಾನ್ಯ ಮಂತ್ರಿಯವರು ಆ ಲಿಪ್ಪನ್ನು ಸಭೆಯ ಮುಂದೆ ಇಟ್ಟಿದ್ದೇನೆ ಎಂದು ಹೇಳಿದ್ದಾರೆ. ಅದನ್ನು ಇಲ್ಲಿ ಓದಿದ್ದರೆ ಈ ಬಗ್ಗೆ ಸಭೆಯ ಸದಸ್ಯರಿಗೆ ಗೊತ್ತಾಗುವುದಿಲ್ಲ. "As assured by him the matter communicated and placed before the

House" ಎಂದು ಹೇಳಿ ನಾನು ಒಂದು ಪತ್ರವನ್ನು ಬರೆದಿದ್ದೇನೆ. ಅದು ಸಾಲಿಸ್ಟ್ ಇದೆ. ಅಷ್ಟಕ್ಕೂ ಅದನ್ನು ಕರೆಸ್ಟ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ ದಯವಿಟ್ಟು ತಾವು ಆ ಲಿಸ್ಟನ್ನು ಓದಬೇಕು.

ಶ್ರೀ ಸುಬ್ಬಯ್ಯಶೆಟ್ಟಿ (ವಾರ್ತಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

Pertaining to the list furnished in the letter dated 12-7-1977 of Sri H. D. Devegowda, Leader of the Opposition.

		1975-76	1976-77	1977-78 (April & May 77)
		Rs.	Rs.	Rs.
1.	Samyukta Karnataka, Bangalore.	84,215	79,179	8,412
2.	Samyukta Karnataka, Hubli.	1,04,259	1,51,393	31,358
** 3.	Samyukta Karnataka, Bangalore & Hubli. (Combined Editions)	15,637	43,527	6,921
4.	Vishala Karnataka, Bangalore.	—	70,615	12,350
5.	Vishala Karnataka Hubli.	50,554	51,509	6,954
6.	Janavani, Bangalore.	28 892	45 8 4	5 180
7.	Lokavani, Bangalore.	22,354	49 440	6 594
8.	Deccan Herald, B'lore.	2,07,782	1,48, 95	18,125
9	Prajavani Bangalore.	2,04,846	1,48,353	21,794
** 10.	Deccan Herald & Prajavani (Combined Editions)	99,050	—	—
11.	Udayavani, Manipal.	1,05,912	1,07,427	25,118
12.	Kannada Prabha B'lore.	1,17 354	69,706	10,515
13.	Prajamata, Bangalore.	3,360	29 300	—
14.	Jwalamukhi Bangalore.	78,000	18,000	3,000
15.	Sudha Bangalore.	1,640	1 613	—
16	Mayura, Bangalore.	787	—	—
17.	Kasturi, Bangalore.	1,160	—	—
18.	Prapancha, Hubli.	13,900	80,800	—

**NOTE: The figures indicate the quantum of advertisements released for publication in both the Editions, simultaneously. The charges are paid at the accepted combined rate for both the Editions which are lower than the total of the individual rates.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ಇದನ್ನು ಒಂದು ಸರ್ಕ್ಯುಲೇಷನ್ ಆಧಾರದ ಮೇಲೆ ಮಾಡುತ್ತಾರೆಯೇ ಇಲ್ಲವೇ ಎಂಬ ಬಗ್ಗೆ ಅವರು ಏನನ್ನೂ ಹೇಳ್ಲಿಲ್ಲ. ಆದರೆ ಇದನ್ನು ನೋಡಿದರೆ ಸರ್ಕ್ಯುಲೇಷನ್ ಆಧಾರದ ಮೇಲೆ ಮಾಡುತ್ತಿಲ್ಲ ಎಂದು ವ್ಯಕ್ತವಾಗುತ್ತಿದೆ. ಪ್ರಜಾವಾಣಿ ಪತ್ರಿಕೆಗೆ ೧೯೬೫-೬೬ನೇ ಸಾಲಿನಲ್ಲಿ ೭೦೦೦ ಸರ್ಕ್ಯುಲೇಷನ್ ಇದೆ. ೧೯೭೬ ಫೆಬ್ರವರಿ ೧೫ರಲ್ಲಿ ೩೫೩ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸಂಯುಕ್ತ ಕರ್ನಾಟಕಕ್ಕೆ ೧೯೬೫-೬೬ರಲ್ಲಿ ೧೦೦೦೦ ಸರ್ಕ್ಯುಲೇಷನ್ ಇದೆ. ೧೯೭೬ ಫೆಬ್ರವರಿ ೧೫ರಲ್ಲಿ ೩೫೩ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವತ್ತು ಒಡನಾಡಿ ಸಂಯುಕ್ತ ಕರ್ನಾಟಕ ಬೆಂಗಳೂರು ಮತ್ತು ಹುಬ್ಬಳ್ಳಿ ಇವೆರಡೂ ಕಂಬೈನ್ಡ್ ಸರ್ಕ್ಯುಲೇಷನ್‌ನಲ್ಲಿ ಸೇರಿಕೊಂಡಿದ್ದರೂ ೧೫ ಸಾವಿರಕ್ಕೂ ಮೇಲೆ ಹೋಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹುಬ್ಬಳ್ಳಿ ಸಂಯುಕ್ತ ಕರ್ನಾಟಕಕ್ಕೆ ೧೯೭೦-೭೫ರಲ್ಲಿ ರೂಪಾಯಿಗಳನ್ನು ಮತ್ತು ಬೆಂಗಳೂರಿನ ಸಂಯುಕ್ತ ಕರ್ನಾಟಕಕ್ಕೆ ೭೯೭೬ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದರೆ 2½ ಲಕ್ಷ ರೂಪಾಯಿಗಳ ಮೇಲೆ ಕೊಟ್ಟಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ. ಇದು ಯಾರ ಸ್ವಂತ ದುಡ್ಡೂ ಅಲ್ಲ. ಇದು ದೇಶದ ಜನತೆಯ ದುಡ್ಡು. ಈ ದುಡ್ಡನ್ನು ಅವರಿಗೆ ಕೊಡುವಾಗ ಯಾವ ಆಧಾರದ ಮೇಲೆ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು. ಅಮೇಲೆ ಈ ಪ್ರಜಾವಾಣಿ ಮತ್ತು ಜನವಾಣಿ ಪತ್ರಿಕಾಲಯವನ್ನು ಮುಚ್ಚಿದ್ದಾರೆ. ಈಗ ಅಲ್ಲಿಯ ಕಾರ್ಮಿಕರಿಗೆ ಉದ್ಯೋಗವಿಲ್ಲವಾಗಿದೆ. ಅಲ್ಲದೇ ಈ ಪ್ರಜಾವಾಣಿ ಮತ್ತು ಜನವಾಣಿ ಪತ್ರಿಕೆಗಳ ಸರ್ಕ್ಯುಲೇಷನ್ ಎಷ್ಟು ಎಂಬುದನ್ನು ತಿಳಿಸಬೇಕು. ಇನ್ನೊಂದು ವಿಷಯ ಏನೆಂದರೆ ಒಂದು ಪತ್ರಿಕೆಯಲ್ಲಿ ಶ್ರೀ ದೇವರಾಜ ಅರಸ್‌ರವರ ಫೋಟೋ ಹಾಕಿ 'ಇನ್‌ಕಾರ್ಸರೇಷನ್ ಆಫ್ ಗಾರ್ಡನ್ಸ್' ಎಂದು ಆ ಮಟ್ಟಿದವರೆಗೂ ಬರೆದುಕೊಂಡಿದ್ದಾರೆ. ನಾನು ಹೇಳುತ್ತೇನೆ ಬೇಕಾದರೆ, ಅವರ ಫೋಟೋ ತೆಗೆದುಕೊಂಡು ಹೋಗಿ ಮನೆಯಲ್ಲಿಟ್ಟು ಪೂಜೆ ಮಾಡಲಿ, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಆ ಬಗ್ಗೆ ಸರ್ಕಾರದವರು ಹಣ ಕೊಡುವಾಗ ಯಾವ ಆಧಾರದ ಮೇಲೆ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು ಅಮೇಲೆ ಮೊನ್ನೆ ಒಂದು ಪತ್ರಿಕೆಯಲ್ಲಿ 'ಎಕ್ಸೈಜ್ ಕಮೀಷನರ್‌ರವರ ಪ್ರಾಮಾಣಿಕತೆಯ ಪ್ರತೀಕ' ಎಂದು ಬರೆದಿದ್ದಾರೆ ಆ ಎಕ್ಸೈಸ್ ಕಮಿಷನರ್ ಮೇಲೆ ವಾಸ್ತವಿಗೆ ಬಂದಹಾಗೆ ಬರೆದಿದ್ದಾರೆ I have gone through it. ಆ ರೀತಿ ಆಗಕೂಡದು. ಈ ಬಗ್ಗೆ ತಾವು ಯೋಚನೆಮಾಡಬೇಕು ಅವರು ಆ ರೀತಿ ಲಂಗುಲಗಾಮು ಇಲ್ಲದೇ ತಮ್ಮ ಮನಸ್ಸಿಗೆ ಬಂದಹಾಗೆ ಬರೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಎಲ್ಲಾ ಪತ್ರಕರ್ತರೂ ಅದಕ್ಕೆ ತಡೆ ಹಾಕಬೇಕು ನಂತರ ಈ ಬ್ಲಾಕ್‌ಮೈಲ್ ಮಾಡುವ ಪತ್ರಿಕೆಗಳಿಗೆ ೭೦ ಸಾವಿರ ಕೊಡುವುದಾದರೆ ಅದನ್ನು ಯಾವ ಆಧಾರದ ಮೇಲೆ ಕೊಡುತ್ತೀರಿ ಎಂದು ಕೇಳಬೇಕಾಗಿದೆ. ಹಿಂದೆ ಮೈಸೂರು ಮಹಾರಾಜರ ಮನೆಗೆ ಹೋದವರಿಗೆಲ್ಲಾ ಜಹಗೀರು ಕೊಡುತ್ತಿದ್ದರಂತೆ; ಆ ರೀತಿ ತಾವು ಕೊಡುವುದಕ್ಕೆ ಆಗುವುದಿಲ್ಲ. It cannot be done according to the whims and fancy. ಸರ್ಕಾರದವರು ಅವರಿಗೆ ಹಣವನ್ನು ಕೊಡುವಾಗ ಯಾವ ಆಧಾರದ ಮೇಲೆ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು.

10-30 A.M.

ಶ್ರೀ ಬಿ. ಸಬ್ಬಯ್ಯಶೆಟ್ಟಿ.—ಮಾನ್ಯ ಸಭಾಧ್ಯಕ್ಷರೇ, ದಿನಪತ್ರಿಕೆಗಳಿಗೆ ಮತ್ತು ಇತರ ಪತ್ರಿಕೆಗಳಿಗೆ ಜಾಹಿರಾತುಗಳನ್ನು ಕೊಡುವಾಗ ಅದರ ಉಪಯುಕ್ತತೆಯನ್ನು ನೋಡಿಕೊಂಡು ಕೊಡುತ್ತೇವೆ.

In an equitable manner it has to be distributed. Suppose in a certain area a tender notice is to be published, we see which paper has got more circulation in that area and to that paper the advertisement is being given. ಬಾಕಿ ಕೆಲವು ಕನ್ನಡ ಪತ್ರಿಕೆಗಳು ಸಣ್ಣ ಸಣ್ಣ ಪತ್ರಿಕೆಗಳೆನಿವೆ ಅವುಗಳಿಗೂ ಕೂಡ ಬೆಳೆಯಬೇಕು ಎಂಬ ಉದ್ದೇಶದಿಂದ ಜಾಹಿರಾತುಗಳನ್ನು ಕೊಡುವಂತೆ ಮೂಲಕ ರಿಪೋರ್ಟ್ ಮಾಡುತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಬ್ಲಾಕ್ ಮೈಲಿಂಗ್ ಪೇಪರ್ಸ್ ಇದೆ ಎಂದು ಹೇಳಿದರು. We try not to encourage such papers.

ಶ್ರೀ ಸಿ. ಬೈರೇಗೌಡ —'ಜ್ವಾಲಮುಖಿ' ಪತ್ರಿಕೆಯ ಸರ್ಕ್ಯುಲೇಷನ್ ಎಷ್ಟು? ಯಾವ ಯಾವ ಪ್ರದೇಶದಲ್ಲಿ ಅದರ ಸರ್ಕ್ಯುಲೇಷನ್ ಜಾಸ್ತಿ ಇದೆ, ಅದರ ಉಪಯುಕ್ತತೆ ಏನು ಎಂಬುದನ್ನು ದಯವಿಟ್ಟು ಸಭೆಗೆ ತಿಳಿಸಬೇಕು.

SRI B. SUBBAIAH SHETTY.—I do not have the figure of circulation at present. I am trying my level best to rationalise these things while giving advertisements.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರಾದೇಶಿಕವಾಗಿ ಸಣ್ಣ ಸಣ್ಣ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುವುದರ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಆದರೆ ಎಲ್ಲರಿಗೂ ಗೊತ್ತಿರುವಹಾಗೆ 'ಸುಧಾ', 'ಮಯೂರ', 'ಕಸ್ತೂರಿ', ಈ ಪತ್ರಿಕೆಗಳು ಪ್ರತಿ ಮನೆಯಲ್ಲಿ ಇರತಕ್ಕ ಪತ್ರಿಕೆಗಳು ಆದರಲ್ಲೂ ಹೆಣ್ಣು ಮಕ್ಕಳು ಎಲ್ಲಾ ಕಡೆ ಈ ಪತ್ರಿಕೆಗಳನ್ನು ಹೆಚ್ಚಾಗಿ ಓದುತ್ತಾರೆ. ಆದರೆ 'ಸುಧಾ'ಗೆ ೧,೬೪೦ ರೂಪಾಯಿ ಜಾಹಿರಾತು, 'ಮಯೂರ'ಗೆ ೭೩೭ ರೂಪಾಯಿಯ ಜಾಹಿರಾತು, 'ಕಸ್ತೂರಿ'ಗೆ ೧,೧೬೦ ರೂಪಾಯಿನ ಜಾಹಿರಾತು ಕೊಟ್ಟಿದ್ದೀರಿ. ಅತ್ಯುತ್ತಮ ಪತ್ರಿಕೆ ಎಂದೂ ಹೆಸರು ಗಳಿಸಿರುವ 'ಕಸ್ತೂರಿ'ಗೆ ಕೇವಲ ೧,೧೬೦ ರೂಪಾಯಿನ ಜಾಹಿರಾತು ಕೊಟ್ಟಿದ್ದೀರಿ 'ಪ್ರಜಾಮತ'ಕ್ಕೆ ೩,೦೦೦ ರೂಪಾಯಿನ ಜಾಹಿರಾತು ಕೊಟ್ಟಿದ್ದೀರಿ. ಇದೂ ಕೂಡ ಮಂಗೆ ಮನೆಗೆ ಹೋಗುವ ವಾರಪತ್ರಿಕೆ. ಇದರ ಸರ್ಕ್ಯುಲೇಷನ್ ೧,೧೮,೦೦೦ ಎಂದು ಕೇಳಿದ್ದೇನೆ. 'ಪ್ರಪಂಚ' ವಿಚಾರವಂತಿಕೆ ಇರತಕ್ಕ ಒಳ್ಳೆಯ ಪತ್ರಿಕೆ. ಇದನ್ನೆಲ್ಲಾ ಬಿಟ್ಟು ೭೮ ಸಾವಿರ ರೂಪಾಯಿಯ ಜಾಹಿರಾತನ್ನು 'ಜ್ವಾಲಮುಖಿ'ಗೆ ಕೊಟ್ಟಿದ್ದೀರಲ್ಲಾ, ಅದು ಯಾವ ಪದೇಶದಲ್ಲಿ ಯಾವ ಪ್ರಮುಖ್ಯತೆ ಪಡೆದಿದೆ ಎಂಬುದನ್ನು ತಿಳಿಸಬೇಕು. ಅದೇ ರೀತಿ ಯಾವ ಯಾವ ಪತ್ರಿಕೆಗಳ ಮೇಲೆ ಮೊಕದ್ದಮೆಗಳು ಕೋರ್ಟಿನಲ್ಲಿವೆ ಎಂಬುದನ್ನೂ ಸಹ ತಿಳಿಸಬೇಕು.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಜ್ವಾಲಾಮುಖಿ ಬಗ್ಗೆ ನಾನು ಹೇಳಿದ್ದೇನೆ. ಅದು... .....

SRI H. D. DEVEGOWDA.—What is the nature of advertisements given to 'Jwalamukhi', ಎಷ್ಟು ಪೇಜ್ ಮಾಡಿದ್ದಾರೆ. Is it in accordance with tariff? Whether the advertisement was given in accordance with rules? What are the norms that have been adopted while giving advertisements? ಇದನ್ನೆಲ್ಲಾ ದಯಮಾಡಿ ತಿಳಿಸಬೇಕು. It cannot be done according to their whims and fancies.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಅಡ್ವರ್ಟೈಸ್‌ಮೆಂಟ್ ಕೊಟ್ಟಿರುವುದು ಕಾನೂನು ಪ್ರಕಾರ ಇದೆ. ಕಾನೂನಿಗೆ ವಿರುದ್ಧವಾಗಿ ಕೊಟ್ಟಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಕಾನೂನು ಪ್ರಕಾರ ಎಡಗಡೆ ಹೋಗುವಾಗಲೇ ಆಕ್ಸಿಡೆಂಟ್ ಆಗುತ್ತದೆ. ಕಾನೂನು ಪ್ರಕಾರ ಹೋಗಿದ್ದೇವೆ, ತಪ್ಪಿಲ್ಲ ಅಂತ ಸಾಯೋಣವೇ?

ಅಧ್ಯಕ್ಷರು.—ಮಾನ್ಯ ಲಿಂಗಪ್ಪನವರಿಗೆ ಯಾಕೆ ಅಷ್ಟೊಂದು ಬೇಸರ? ಇನ್ನು ಸಾಕು ಬಿಡಿ. ಎಲ್ಲಾ ಹೇಳಿಬ್ಬಾರಲ್ಲ.

ಶ್ರೀ ಎಚ್. ಡಿ ದೇವೇಗೌಡ.—ಅಧ್ಯಕ್ಷರೇ, ಬೇಡ, ಅವರಿಗೆ ಅಷ್ಟೊಂದು ರಕ್ಷಣೆ ಕೊಡಬೇಡಿ. ಇದು ತೀವ್ರವಾದ ವಿಚಾರ. ಲಘುವಾಗಿ ನಾವು ಮಾತನಾಡುತ್ತಿಲ್ಲ. ಸಣ್ಣ ಪತ್ರಿಕೆಗಳು ಬೆಳೆಯಬೇಕು ಎಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಜಿಲ್ಲಾಮಟ್ಟದಲ್ಲಿ ಅನೇಕ ಸಣ್ಣ ಸಣ್ಣ ಪತ್ರಿಕೆಗಳು ಉತ್ತಮ ರೀತಿಯಿಂದ ಕೆಲಸ ಮಾಡುತ್ತಿವೆ. ಸಣ್ಣ ಪತ್ರಿಕೆಗಳು ಉತ್ತಮ ರೀತಿಯಲ್ಲಿ ಯೋಗ್ಯವಾಗಿ ಪತ್ರಿಕಾ ರಂಗದಲ್ಲಿ ಆ ಪತ್ರಿಕಾ ಕಾರ್ಯಗೌರವವನ್ನು ಚೆನ್ನಾಗಿ ನಿರ್ವಹಣೆ ಮಾಡುತ್ತಿವೆ ಉತ್ತಮವಾದ ಸೇವೆ ಸಲ್ಲಿಸಬೇಕು ಎಂಬ ಮನೋಭಾವವುಳ್ಳ ಅನೇಕ ಸಣ್ಣ ಸಣ್ಣ ಪತ್ರಿಕೆಗಳು ಇವೆ ಆದರೆ ತಾವು ಜಾಹೀರಾತು ಕೊಟ್ಟಿರುವ ಜ್ವಾಲಾಮುಖಿ ಪತ್ರಿಕೆ ಏನಿದೆ. ಇದು ಏನೂ ಅಂಥ ಮಹತ್ವವಾದ ಪತ್ರಿಕೆಯೇನಲ್ಲ ಧರಣ ಸತ್ಯಾಗ್ರಹ ಹೊರಗಡೆ ಹೋದಾಗ ಯಾರೋ ಈ ಪತ್ರಿಕೆ ಹಿಡಿದುಕೊಂಡು ದೇವೇಗೌಡರು ಹಾಗೆ ಮಾಡಿದರು, ದೇವರಾಜ ಅರಸರು ಹೀಗೆ ಮಾಡಿದರು ಅಂತ ಕೂಗಿಕೊಂಡು ಓಡಾಡುವ ಇಂಥ ಪತ್ರಿಕೆಗೆ ಇಷ್ಟೊಂದು ಮೊತ್ತದ ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದೀರಲ್ಲಾ. ನೀವು ನಿಜವಾಗಿ ಸರ್ಕಾರ ನಡೆಸುತ್ತೀರಾ? ಇಂಥವರನ್ನು ಬೆಳೆಸಿಕೊಂಡು ಪ್ರಜಾತಂತ್ರಕ್ಕೆ ಧಕ್ಕೆ ತಂದಿದ್ದೀರಿ. ಇಂಥವರನ್ನು ದೂರ ಇಡಬೇಕು. ಆ ಪತ್ರಿಕೆಯ ಮೇಲೆ ಅಷ್ಟೊಂದು ಅಭಿಮಾನ ಇದ್ದರೆ

ದೇವರಾಜ ಅರಸರು ಸ್ವಂತ ಹಣದಿಂದ ೨೫-೫೦ ಸಾವಿರ ರೂಪಾಯಿಯನ್ನು ಬೇಕಾದರೆ ಕೊಡಲಿ. ಆದರೆ ಸರ್ಕಾರದ ಹಣ ಕೊಡುವಾಗ ಎಚ್ಚರಿಕೆಯಿಂದ ಕೆಲವು ನಿಯಮಗಳನ್ನು ಇಟ್ಟುಕೊಂಡು ಕೊಡಬೇಕು ನೀವು ಅಧಿಕಾರಕ್ಕೆ ಬಂದು ೬ ವರ್ಷ ಆಯಿತು, ಇನ್ನಾದರೂ ದುರ್ಮವಹಾರ ನಿಲ್ಲಿಸಿ.

ಶ್ರೀ ಬಿ ಸುಬ್ಬಯ್ಯಶೆಟ್ಟಿ —ಮಾನ್ಯ ಸಭಾಧ್ಯಕ್ಷರೆಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಹಾಗೆ ಪೊಫೆಷನಲ್ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಪಶ್ನೆಗಳಿವೆ. ಅವುಗಳಿಗೆ ಹಚ್ಚನ ಪ್ರೋತ್ಸಾಹ ಕೊಡಬೇಕೆಂದು ಒಂದು ಪಾಲಿಸಿಯನ್ನು ಇಟ್ಟುಕೊಂಡು ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದೇವೆ

ಶ್ರೀ ಕೋಣಂದೂರು ಲಿಂಗಪ್ಪ.—ಮಂಗಳೂರಿನ ನವಭಾರತಕ್ಕೆ ಎಷ್ಟು ಅಡ್ವಟ್ರ್ಯೆಸ್‌ಮೆಂಟ್ ಕೊಟ್ಟಿದ್ದೀರಿ ?

(ಉತ್ತರವಿಲ್ಲ.)

ಶ್ರೀ ಪಿ ಎನ್. ಪಾಟೀಲ್. - ಮಾನ್ಯ ಅಧ್ಯಕ್ಷರೇ, ರೂಲ್ ೩೨೨ರ ಕೆಳಗೆ ಒಂದು ನೋಟೀಸ್ ಕಳಿಸಿ ತಮ್ಮ ಅನುಮತಿ ಕೇಳಿದ್ದೇನೆ. ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು —ನಾಲ್ಕು ಪುಟ ಬರೆದುಕೊಟ್ಟಿದ್ದೀರಿ. ಅದು ೩೨೨ರ ಕೆಳಗೆ ಹೇಗೆ ಆಗುತ್ತದೆ. ಇವತ್ತು ಆಗುವುದಿಲ್ಲ, ಸೋಮವಾರ ತೆಗೆದುಕೊಳ್ಳೋಣ

Non-Official Resolutions

(i) *re: improving, rebuilding and improving the Slums of Bangalore City within five years from 1977.*

(Debate Continued)

†ಶ್ರೀ ಟಿ. ಆರ್. ಶಾಮಣ್ಣ (ಕೋಚೆ) —ಮಾನ್ಯ ಸಭಾಧ್ಯಕ್ಷರೆಯವರೇ, ನನ್ನ ನಿರ್ಣಯ ಈ ರೀತಿ ಇದೆ '೧೯೭೭ ರಿಂದ ೫ ವರ್ಷಕ್ಕೆ ಮೀರದ ಕಾಲಾವಧಿಯೊಳಗಾಗಿ ಬೆಂಗಳೂರು ನಗರದ ಕೊಳಚೆ ಪ್ರದೇಶಗಳನ್ನು ತೆಗೆದುಹಾಕಲು ಹಾಗೂ ಪುನರ್‌ನಿರ್ಮಿಸಲು ಅಥವಾ ತೃಪ್ತಿಕರವಾಗಿ ಸುಧಾರಿಸಲು ಅಗ್ರ ಆದ್ಯತಾ ಆಧಾರದ ಮೇಲೆ ಯೋಜನಾ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸರ್ಕಾರದವರಿಗೆ ಈ ಸಭೆಯುವರು ಶಿಫಾರಸು ಮಾಡುತ್ತಾರೆ ನಾನು ತಂದಿರತಕ್ಕ ಈ ನಿರ್ಣಯ ಬಹಳ ಮುಖ್ಯವಾದದ್ದು ಮತ್ತು ವಿರೋಧಕ್ಕೆ ಅಸ್ಪದವಿಲ್ಲದಂಥಾದ್ದು. ಬೆಂಗಳೂರು ನಗರ ಒಂದು ಸುಂದರವಾದ ನಗರ ಹಾಗೂ ಈ ರಾಜ್ಯದ ರಾಜಧಾನಿ ಇಂಥ ನಗರದಲ್ಲಿ ಕೊಳಚೆ ಪ್ರದೇಶ ಇರತಕ್ಕದ್ದು ಬೆಂಗಳೂರು ನಗರಕ್ಕೆ ಕ್ಯಾನ್ಸರ್ ಇದ್ದಹಾಗೆ. ಅಲ್ಲದೆ ಈ ನಗರದ ಸೌಂದರ್ಯಕ್ಕೆ ಅದರಿಂದ ಧಕ್ಕೆಯುಂಟಾಗಿದೆ ಎಂದು ಹೇಳಿದರೆ ತಪ್ಪಾಗುವಾರದು. ಕಳೆದ ೧೫-೨೦ ವರ್ಷದಿಂದಲೂ ಕೊಳಚೆ ಪ್ರದೇಶವನ್ನು ತೆಗೆದುಹಾಕಬೇಕು, ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶ ಇರಕೂಡದು ಎಂದು ಹೇಳುತ್ತಿದ್ದೇವೆ. ಕಳೆದ ೧೫ ವರ್ಷಗಳ ಕೆಳಗೆ ಬೆಂಗಳೂರು ನಗರದಲ್ಲಿ ಕೇವಲ ೭೦-೭೫ ಕೊಳಚೆ ಪ್ರದೇಶಗಳಿದ್ದವು. ಇವತ್ತು ೧೭೦ರವರೆಗೆ ಹೆಚ್ಚಾಗಿವೆ. ಅಂದರೆ ಮೊದಲಿದ್ದಂಥ ಸ್ಲಂ ಈಗ ದ್ವಿಗುಣವಾಗಿದೆ. ಈ ರೀತಿ ದ್ವಿಗುಣ, ತ್ರಿಗುಣವಾಗುತ್ತಿದ್ದರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವೇ ಹೇಗೆ ಎಂಬ ಬಗ್ಗೆ ಯೋಚನೆ ಮಾಡಬೇಕು. ಅತೀ ಮುಖ್ಯವಾಗಿ ಈ ಸ್ಲಂಗಳು ಬೆಳೆಯುತ್ತಿರುವುದನ್ನು ತಡೆಗಟ್ಟದೇ ಹೋದರೆ ನಾವು ಯಾವ ರೀತಿಯಲ್ಲೂ ಕೂಡ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಒತ್ತಾಯಪೂರ್ವಕವಾಗಿ ತಿಳಿಸಬೇಕಾಗಿದೆ ಎರಡನೆಯದಾಗಿ ನಾವು ತೆಗೆದ ಕೊಳ್ಳತಕ್ಕ ಕೆಲಸ ಏನೆ ಆದರು ಶಾಶ್ವತವಾಗಿ ಸ್ಲಂಗಳ ನಿರ್ಮೂಲವಾಗುವಂತಿರಬೇಕೇ ವಿನಹ ತೇಪೆ ಹಾಕತಕ್ಕ ರೀತಿಯಲ್ಲಿ ಕೆಲಸ ಮಾಡಿದರೆ ಕೊಳಚೆ ಪ್ರದೇಶ ನಿರ್ಮೂಲನ ಮಾಡುವುದಾಗಲೀ, ಉತ್ತಮಪಡಿಸುವುದಾಗಲೀ ಆಗುವುದಿಲ್ಲ. ಕಳೆದ ಮೂರು ವರ್ಷಗಳ ಕೆಳಗೆ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಪ್ರಾರಂಭವಾಯಿತು. ಆ ಬೋರ್ಡಿಗೆ ೬ ಕೋಟಿಗಿಂತ ರೂಪಾಯಿ ಖರ್ಚಾಗಿದ್ದರೂ ಸಹ ಅದು ಆ ಬೋರ್ಡನ್ನು ನಡೆಸುವುದಕ್ಕೆ ಖರ್ಚಾಗಿದೆಯೇ ಹೊರತು ಖಂಡಿತವಾಗಿ ಸ್ಲಂಗಳನ್ನು ನಿರ್ಮೂಲನ ಮಾಡುವುದಕ್ಕಾಗಿ ಖರ್ಚಾಗಿಲ್ಲ ಬೆಂಗಳೂರು ನಗರದಲ್ಲಿ ಈ ಬೋರ್ಡ್ ಯಾವ ವಿಧವಾದಂಥ ಪ್ರಯೋಜನಕಾರಿ ಕೆಲಸವನ್ನು ಮಾಡದೇ ಇರತಕ್ಕದ್ದು ಶೋಚನೀಯವಾದ ವಿಚಾರ. ಸ್ಲಂಗಳು